**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ.ಮಲ್ಲೇಶ್ವರಂ, ಬೆಂಗಳೂರು.560003.**

**2024–25ರ ಎಸ್.ಎಸ್.ಎಲ್.ಸಿ.ಮಾದರಿ ಪ್ರಶ್ನೆಪತ್ರಿಕೆ–3 ಕೀ ಉತ್ತರ. ವಿಷಯ: ಸಮಾಜ ವಿಜ್ಞಾನ.**

**ವಿಷಯ ಸಂಕೇತ:85–ಕೆ ಸಮಯ:3ಗಂಟೆ 15 ನಿಮಿಷ. ಗರಿಷ್ಠ ಅಂಕಗಳು:80.**

---

**I.ಈ ಪ್ರತಿಯೊಂದು ಪ್ರಶ್ನೆಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನುಬರೆಯಿರಿ. 8X1=8**

1.ವೇದಗಳಿಗೆ ಹಿಂದಿರುಗಿ ಎನ್ನುವ ಘೋಷಣೆಯನ್ನು ಹೊರಡಿಸಿದವರು

ಎ)ಆತ್ಮರಾಮ್ ಪಾಂಡುರಂಗ ಬಿ)ದಯಾನಂದ ಸರಸ್ವತಿ ಸಿ) ಸ್ವಾಮಿ ವಿವೇಕಾನಂದ ಡಿ) ರಾಜಾ ರಾಮ್‌ಮೋಹನ್ ರಾಯ್

ಉತ್ತರ:ಬಿ) ದಯಾನಂದ ಸರಸ್ವತಿ

2.ಕದನ ಬಾಂಧವ್ಯತ್ರಯ ಮೈತ್ರಿಕೂಟ ರಚಿಸಿಕೊಂಡ ರಾಷ್ಟ್ರಗಳ ಸರಿಯಾದಗುಂಪು

ಎ) ಬ್ರಿಟನ್,ಫ್ರಾನ್ಸ್, ರಷ್ಯಾ ಬಿ) ಜರ್ಮನಿ ,ಆಸ್ಟ್ರೀಯಾ,ಹಂಗೇರಿ,ಇಟಲಿ

ಸಿ) ಇಟಲಿ,ಫ್ರಾನ್ಸ್ ರಷ್ಯಾ ಡಿ) ಜರ್ಮನಿ ,ಆಸ್ಟ್ರೀಯಾ,ಹಂಗೇರಿ,ಫ್ರಾನ್ಸ್

ಉತ್ತರ: ಎ) ಬ್ರಿಟನ್,ಫ್ರಾನ್ಸ್, ರಷ್ಯಾ

3.ನೋಬೆಲ್ ಪ್ರಶಸ್ತಿ ಪಡೆದಿರುವ ವಿಶ್ವಸಂಸ್ಥೆಯ ವಿಶೇಷ ಸಂಸ್ಥೆ

ಎ) ವಿಶ್ವ ಆರೋಗ್ಯ ಸಂಸ್ಥೆ ಬಿ) ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ

ಸಿ) ಆಹಾರ ಮತ್ತು ಕೃಷಿ ಸಂಸ್ಥೆ ಡಿ) ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ತುರ್ತುನಿಧಿ

ಉತ್ತರ: ಡಿ) ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ತುರ್ತುನಿಧಿ

4. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದವರು

ಎ) ಸುಂದರಲಾಲ್ ಬಹುಗುಣ ಬಿ) ಚಂಡಿ ಪ್ರಸಾದ್ ಭಟ್ ಸಿ) ಶಿವರಾಮ ಕಾರಂತ ಡಿ) ಮೇಧ ಪಾಟ್ಕರ್

ಉತ್ತರ: ಡಿ) ಮೇಧ ಪಾಟ್ಕರ್

5. ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಆವರ್ತ ಮಾರುತಗಳು ಬಂಗಾಳಕೊಲ್ಲಿಯಲ್ಲಿ ನಿರ್ಮಿತಗೊಳ್ಳಲು ಕಾರಣ

ಎ) ಭೂಮಿ ಮತ್ತು ಸಾಗರಗಳ ನಡುವಿನ ಉಷ್ಣಾಂಶ ಮತ್ತು ಒತ್ತಡಗಳಲ್ಲಿನ ವ್ಯತ್ಯಾಸ

ಬಿ) ಉತ್ತರಾರ್ಧಗೋಳದ ಮೇಲೆ ಸೂರ್ಯನ ಲಂಬ ಕಿರಣಗಳು ಬಿದ್ದು ಉಷ್ಣಾಂಶ ಹೆಚ್ಚಾಗುತ್ತದೆ.

ಸಿ) ಈ ಪ್ರದೇಶಗಳು ಸಮುದ್ರ ಮಟ್ಟದಿಂದ ಎತ್ತರದಲ್ಲಿರುವುದರಿಂದ

ಡಿ) ಉತ್ತರ ಭಾರತವು ಸಮುದ್ರದಿಂದ ದೂರ ವಿರುವುದರಿಂದ

ಉತ್ತರ: ಎ) ಭೂಮಿ ಮತ್ತು ಸಾಗರಗಳ ನಡುವಿನ ಉಷ್ಣಾಂಶ ಮತ್ತು ಒತ್ತಡಗಳಲ್ಲಿನ ವ್ಯತ್ಯಾಸ

6. ಸಂಘಟಿತ ಕಾರ್ಮಿಕ ವಲಯಕ್ಕೆ ಉತ್ತಮ ಉದಾಹರಣೆ

ಎ) ಮನೆಗೆಲಸಗಾರರು ಬಿ) ಕೃಷಿ ಕಾರ್ಮಿಕರು ಸಿ) ಸರ್ಕಾರಿ ನೌಕರರು ಡಿ) ತಳ್ಳುಗಾಡಿ ವ್ಯಾಪರಿಗಳು

ಉತ್ತರ: ಸಿ) ಸರ್ಕಾರಿ ನೌಕರರು

7. ಆಡಳಿತ ವಿಕೇಂದ್ರೀಕರಣಕ್ಕಾಗಿ ಭಾರತದಲ್ಲಿ ಜಾರಿಗೆ ತಂದಿರುವ ಪದ್ಧತಿ

ಎ) ಪಂಚಾಯತ್ ರಾಜ್ ಬಿ) ಸ್ತ್ರೀ ಶಕ್ತಿ ಸಿ) ನರೇಗಾ ಡಿ) ಗ್ರಾಹಕರ ನ್ಯಾಯಾಲಯ

ಉತ್ತರ: ಎ) ಪಂಚಾಯತ್ ರಾಜ್

8. ಇವರು ಜಿಲ್ಲಾ ಗ್ರಾಹಕರ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ

ಎ)ಜಿಲ್ಲಾ ನ್ಯಾಯಾಧೀಶರು ಬಿ) ಜಿಲ್ಲಾಧಿಕಾರಿಗಳು

ಸಿ) ಗ್ರಾಹಕ ನ್ಯಾಯಾಲಯದ ಅಧ್ಯಕ್ಷರು ಡಿ) ರಾಜ್ಯದ ಮುಖ್ಯ ನ್ಯಾಯಾಧೀಶರು

ಉತ್ತರ: ಎ)ಜಿಲ್ಲಾ ನ್ಯಾಯಾಧೀಶರು

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8X1=8**

9.ಸ್ವಾಮಿವಿವೇಕಾನಂದರು ರಾಮಕೃಷ್ಣಮಿಷನ್ ಸಂಸ್ಥೆಯನ್ನು ಏಕೆ ಸ್ಥಾಪಿಸಿದರು?

ಉತ್ತರ: ತಮ್ಮ ಗುರುಗಳಾದ ರಾಮಕೃಷ್ಣ ಪರಮಹಂಸರ ಧ್ಯೇಯಾದರ್ಶಗಳನ್ನು ಪ್ರಚಾರ ಮಾಡಲು ರಾಮಕೃಷ್ಣ ಮಿಷನ್‌ನನ್ನು ಸ್ಥಾಪಿಸಿದರು.

10.ಗೋಬೆಲ್ಸ್ ಎಂಬ ವಿಶೇಷ ಮಂತ್ರಿಯನ್ನು ಹಿಟ್ಲರ್ ನೇಮಿಸಿದ ಉದ್ದೇಶವೇನು?

ಉತ್ತರ:ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಗೋಬೆಲ್ಸ್ ಎಂಬ ವಿಶೇಷವಾದ ಮಂತ್ರಿಯನ್ನು ಹಿಟ್ಲರ್ ನೇಮಕ ಮಾಡಿದನು.

11. ವಿಶ್ವಸಂಸ್ಥೆಯ ದತ್ತಿ ಸಮಿತಿಯನ್ನು ಏಕೆ ಸ್ಥಾಪಿಸಲಾಗಿದೆ?

ಉತ್ತರ: ವಸಾಹತು ಶಾಹಿತ್ವಕ್ಕೆ ಒಳಪಟ್ಟಿದ್ದ ಪ್ರದೇಶಗಳು ಸಾರ್ವಭೌಮ ರಾಷ್ಟ್ರಗಳಾಗಿ ಉದಯಿಸಲು ಮತ್ತು ಅವುಗಳ ಮೇಲುಸ್ತುವಾರಿ ಮಾಡಲು ಸ್ಥಾಪಿಸಿದ ಸಂಸ್ಥೆಯೇ ದತ್ತಿ ಸಮಿತಿ.

12. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

ಉತ್ತರ: ಸಮಾಜದ ಜನರನ್ನು ಆದಾಯ,ಲಿಂಗ,ಜಾತಿ,ಶಿಕ್ಷಣ,ಬಡವ–ಶ್ರೀಮಂತರಾಗಿ ವಿಂಗಡಿಸುವುದಕ್ಕೆ ಸಾಮಾಜಿಕ ಸ್ತರ ವಿನ್ಯಾಸ ಎನ್ನುವರು.

13. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ ಯಾವುದು?

ಉತ್ತರ: ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶ ರಾಜಸ್ತಾನದ ರೋಯ್ಲಿ

14. ಗ್ರಾಮೀಣಾಭಿವೃದ್ಧಿ ಎಂದರೇನು?

ಉತ್ರ: ಗ್ರಾಮದ ಸರ್ವತೋಮುಖ ಅಭಿವೃದ್ಧಿ.

15. ಮಾರ್ಚ್ 15ರಂದೆ ಪ್ರತಿವರ್ಷ ವಿಶ್ವ ಗ್ರಾಹಕರ ದಿನಾಚರಣೆ ಆಚರಿಸಲಾಗುತ್ತದೆ.ಏಕೆ?

ಉತ್ತರ: ಅಂದು ಅಮೆರಿಕಾದ ಅಧ್ಯಕ್ಷರಾಗಿದ್ದ **ಜಾನ್.ಎಫ್.ಕೆನಡಿ** ಅವರು ಅಲ್ಲಿನ ನಾಗರಿಕರಿಗೆ **ಸಂರಕ್ಷಣೆ, ಮಾಹಿತಿ,ನಿವೇದನೆ ಮತ್ತು ಪರಿಹಾರ** ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು

16. ಅಂತರಾಷ್ಟ್ರೀಯ ಮೌಲ್ಯ ನಿರ್ಧಾರಕ್ಕೆ ಮಾಧ್ಯಮವಾಗಿ ಬಳಸಲ್ಪಡುವ ಲೋಹ ಯಾವುದು?

ಉತ್ತರ: ಅಂತರಾಷ್ಟ್ರೀಯ ಮೌಲ್ಯ ನಿರ್ಧಾರಕ್ಕೆ ಮಾಧ್ಯಮವಾಗಿ ಬಳಸಲ್ಪಡುವ ಲೋಹ ಚಿನ್ನ.

**III.ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 8X2=16**

17.ಭಾರತದಲ್ಲಿ ನಿರುದ್ಯೋಗಕ್ಕೆ ಕಾರಣವಾದ ಅಂಶಗಳು ಯಾವುವು?

ಉತ್ತರ : * ಅತಿಯಾದ ಜನಸಂಖ್ಯೆ * ಯಾಂತ್ರೀಕರಣ * ಅತಿಯಾದ ಶ್ರಮ ವಿಭಜನೆ * ಸಾಮಾಜಿಕ ಅಸಮಾನತೆ * ಬಂಡವಾಳದ ಕೊರತೆ * ಅನಕ್ಷರತೆ

**ಅಥವಾ** ಬಾಲ್ಯ ವಿವಾಹದ ಪರಿಣಾಮಗಳಾವುವು?

ಉತ್ತರ:* ಮಕ್ಕಳ ಸರ್ವತೋಮುಖ ಬೆಳವಣಿಗೆ ಕುಂಠಿತ * ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ,ನಿರ್ಲಕ್ಷ್ಯ,ಹಿಂಸೆ, ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಹೆಚ್ಚುತ್ತವೆ. * ಬಾಲ್ಯತನ,ಶಿಕ್ಷಣ,ಮನರಂಜನೆ,ಆಟವಾಡುವುದು, ಪೌಷ್ಠಿಕಾಂಶ ಪಡೆಯುವ ಹಕ್ಕಿನಿಂದ ವಂಚಿತ * ಅನಾರೋಗ್ಯ, ಗರ್ಭಪಾತ, ಹೆಣ್ಣು ಶಿಶು ಹತ್ಯೆ ಮತು ಭ್ರೂಣ ಹತ್ಯೆ

18.ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರದ ಪಾತ್ರವೇನು?

ಉತ್ತರ:*ರಾಷ್ಟ್ರದ ಸುಖ ಶಾಂತಿಗೆ, ಐಕ್ಯತೆಗೆ ಹಾಗೂ ಅಭಿವೃದ್ಧಿಗೆ ಕಾನೂನು ಸುವ್ಯವಸ್ಥೆ ಅವಶ್ಯಕವಾಗಿದೆ.

*ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಸಮಾಜದ ಇಂದಿನ ದಿನಗಳಲ್ಲಿ ಕಾನೂನು ಸುವ್ಯವಸ್ಥೆ ಅತಿ ಪ್ರಮುಖ ಸ್ಥಾನವನ್ನು ಪಡೆದಿದೆ.

*ಕಾನೂನು ಮತ್ತು ಸುವ್ಯವಸ್ತೆ ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. * ಸರ್ವರ ಸಂರಕ್ಷಣಗೆ ಕಾನೂನು ಆಡಳಿತ ಅಗತ್ಯವಾಗಿದೆ.*7ನೇ ಅನುಸೂಚಿಯ ಪ್ರಕಾರ ಕಾನೂನು ಸುವ್ಯವಸ್ಥೆಯನ್ನು ರಾಜ್ಯಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

**ಅಥವಾ** ಅನಕ್ಷರತೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉತ್ತರ:***2001 ಸರ್ವಶಿಕ್ಷ ಅಭಿಯಾನ** ಕಾರ್ಯಕ್ರಮ–**6ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ.*****1988 ರಾಷ್ಟ್ರೀಯ ಸಾಕ್ಷರತಾ ಮಿಷನ್–ಅನಕ್ಷರಸ್ತರನ್ನು ಸಾಕ್ಷರರನ್ನಾಗಿ ಮಾಡುವುದು.*****ಸಾಕ್ಷರ ಭಾರತ** ಕಾರ್ಯಕ್ರಮ–**ಅನಕ್ಷರತೆ ಹೋಗಲಾಡಿಸುವುದು** .*ಮಹಿಳಾ ಶಿಕ್ಷಣಕ್ಕೆ ಆದ್ಯತೆ.*ವಿಕಲ ಚೇತನರ ಶಿಕ್ಷಣ ಮತ್ತು ಮಹಿಳಾ ಜಾಘರತಿಗೆ ಆದ್ಯತೆ ನೀಡುವುದು. ***21ಎ ವಿಧಿ–ಶಿಕ್ಷಣ ಮೂಲಭೂತ ಹಕ್ಕು *2009 ಶಿಕ್ಷಣ ಹಕ್ಕು ಕಾಯ್ದೆ–6ರಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡುವುದು.** *2018ರ ಸಮಗ್ರ ಶಿಕ್ಷಾ ಕಾರ್ಯಕ್ರಮ. *ನವಭಾರತ ಸಾಕ್ಷರತಾ ಕಾರ್ಯಕ್ರಮ.

19. ಯುರೋಪಿಯನ್ನರು ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳು ಯಾವುವು?

ಉತ್ತರ: * ಸಾ.ಶ.**1453**ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟ್ಯಾಂಟಿನೋಪಾಲ್ ನಗರ ವಶಪಡಿಸಿಕೊಂಡರು.*ಪೂರ್ವ–ಪಶ್ಚಿಮ ರಾಷ್ಟ್ರಗಳ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಬಂದವು.* ಈವ್ಯಾಪಾರದ ಮೇಲೆ ತೀವ್ರ ತೆರಿಗೆ ವಿಧಿಸಿದರು. * ಇದರಿಂದ ಯುರೋಪಿಯನ್ನರಿಗೆ ವ್ಯಾಪಾರ ಲಾಭದಾಯಕವಾಗಲಿಲ್ಲ.* ಸ್ಪೈನ್ ಮತ್ತು ಪೋರ್ಚುಗಲ್ ದೇಶಗಳು ಇಟಲಿಯ ವರ್ತಕರ ಏಕಸ್ವಾಮ್ಯ ಮುರಿಯಲು ಮುಂದಾದರು *ಹೊಸ ಸಮುದ್ರಮಾರ್ಗಗಳನ್ನು ಹುಡುಕಲು ನಾವಿಕರನ್ನು ಪ್ರೋತ್ಸಾಹಿಸಿದರು. * ಇದಕ್ಕೆ ಪೂರಕವಾಗಿ ಹೊಸ ಆವಿಷ್ಕಾರಗಳಾದ **ದಿಕ್ಸೂಚಿ,ಆಸ್ಟ್ರೋಲೋಬ್,ಸಿಡಿಮದ್ದು, ಭೂಪಟ** ಮೊದಲಾದವು ನೆರವಿಗೆ ಬಂದವು.

20. ಸಹಾಯಕ ಸೈನ್ಯ ಪದ್ಧತಿಯು ದೇಶೀಯ ರಾಜರುಗಳನ್ನು ಬಲಹೀನಗೊಳಿಸಿತು.ಹೇಗೆ?

ಉತ್ತರ:* ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.* ಆ ಸೈನ್ಯದ ಖರ್ಚು–ವೆಚ್ಚವನ್ನು ಆ ದೇಶೀಯ ರಾಜನೇ ಭರಿಸಬೇಕು ಇಲ್ಲವೇ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.* ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.*ಬ್ರಿಟಿಷರ ಅನುಮತಿಯಿಲ್ಲದೇ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.*ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ/ಸಂಧಾನ ಮಾಡಿಕೊಳ್ಳಬೇಕಾ ದರೆ ಗೌರ್‍ನರ್ ಜನರಲ್‌ನ ಅನುಮತಿ ಬೇಕು.*ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

21. ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು?

ಉತ್ತರ:* ನದಿಗಳಲ್ಲಿ ಹೂಳು ತುಂಬಿಕೊಂಡು ಪ್ರವಾಹ ಉಂಟಾಗುತ್ತದೆ.* ನದಿಗಳ ಪಾತ್ರದಲ್ಲಿ ಬದಲಾವಣೆ.

* ನೀರಿನ ಸಂಗ್ರಹ ಸಾಮರ್ಥ್ಯಯ ಕಡಿಮೆ * ಭೂಮಿಯಲ್ಲಿ ನೀರು ಇಂಗುವ ಸಾಮರ್ಥ್ಯಯ ಕಡಿಮೆ.

* ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ * ವ್ಯವಸಾಯದಲ್ಲಿ ಫಲವತ್ತತೆ ಕಡಿಮೆಯಾಗುತ್ತದೆ* ಬರಗಾಲ ಸೃಷ್ಟಿ.

22. ಅರಣ್ಯಗಳನ್ನು ನಾವು ಹೇಗೆ ಸಂರಕ್ಷಿಸಬಹುದು?

ಉತ್ತರ:*ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು. * ಅರಣ್ಯಗಳನ್ನು ರೋಗಗಳಿಂದ ನಿಯಂತ್ರಿಸುವುದು *ಸಸ್ಯಗಳನ್ನು ನೆಡುವುದು*ಬೀಜಗಳನ್ನು ಹರಡುವುದು*ಕಾನೂನು ಬಾಹಿರವಾಗಿ ಮರಗಳನ್ನು ಕಡಿಯುವುದನ್ನು ನಿಯಂತ್ರಿಸುವುದು * ಮರಗಳ ಕಳ್ಳ ಸಾಗಣಿಕೆ ನಿಯಂತ್ರಿಸುವುದು.*ಅತಿಯಾಗಿ ದನಕರುಗಳ ಮೆಯಿಸುವಿಕೆಯನ್ನು ನಿಯಂತ್ರಿಸುವುದು.* ಸಾಮಾಜಿಕ ಅರಣ್ಯ ಬೆಳೆಸುವುದು.* ಪರಿಸರ ದಿನಾಚರಣೆ ಮಾಡುವುದು * ಮನಮಹೋತ್ಸವವನ್ನು ಆಚರಿಸುವುದು.

23.ಪ್ರತ್ಯಕ್ಷ ತೆರಿಗೆಗಳು ಪರೋಕ್ಷ ತೆರಿಗೆಗಳಿಗಿಂತ ಹೇಗೆ ಭಿನ್ನವಾಗಿವೆ?

| ಪ್ರತ್ಯಕ್ಷ ತೆರಿಗೆ | ಪರೋಕ್ಷ ತೆರಿಗೆ |
|---|---|
| *ತೆರಿಗೆ ಹೊರೆಯನ್ನು ತಾನೆ ಹೊರುವುದು. | * ತೆರಿಗೆ ಹೊರೆಯನ್ನು ಬೇರೆಯವರ ಮೇಲೆ |
| *ವರಮಾನ ತೆರಿಗೆ *ಕಂಪನಿ ತೆರಿಗೆ | ವರ್ಗಾಯಿಸುವುದು. |
| *ಸ್ಟ್ಯಾಂಪ್ ತೆರಿಗೆ * ಸಂಪತ್ತಿನ ತೆರಿಗೆ | *ಜಿ.ಎಸ್.ಟಿ. * ಸೇವಾ ತೆರಿಗೆ *ವಿದೇಶಿ ಪ್ರವಾಸಿಗರ |
| | ತೆರಿಗೆ * ಕೇಂದ್ರ ಅಬಕಾರಿ ಸುಂಕ. |

24. ಉಳಿತಾಯ ಬ್ಯಾಂಕ್ ಖಾತೆಗಳು ಚಾಲ್ತಿ ಬ್ಯಾಂಕ್ ಖತೆಗಳಿಗಿಂತ ಭಿನ್ನವಾಗಿವೆ. ವಿವರಿಸಿ.

| ಉಳಿತಾಯ ಖಾತೆ | ಚಾಲ್ತಿ ಖಾತೆ |
|---|---|
| *ವೇತನ ಪಡೆಯುವವರು ಮತ್ತು ನಿಯಮಿತ ಆದಾಯ ಹೊಂದಿರುವ ಜನರು ತೆರೆಯುತ್ತಾರೆ. | *ವ್ಯಾಪಾರಸ್ತರು,ವಾಣಿಜ್ಯೋದ್ಯಮಿಗಳು,ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. |
| *ಈ ಸೌಲಭ್ಯಗಳನ್ನು ವಿದ್ಯಾರ್ಥಿಗಳು,ಹಿರಿಯ ನಾಗರೀಕರು,ಪಿಂಚಣಿದಾರರು ಕೂಡ ತೆರೆಯಬಹುದು. | *ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು/ಉಪಸರ್ಗ ವ್ಯವಹಾರಗಳ ಮೂಲಕ ಹಣ ಹಿಂಪಡೆಯಬಹುದು. |
| *ಜನರ ಉಳಿತಾಯಕ್ಕೆ ಸಹಾಯ ಮತ್ತು ಉಳಿತಾಯದಗರಿಷ್ಠ ಮಿತಿಯಿಲ್ಲ. ಠೇವಣಿಗೆ ಅಲ್ಪ ಪ್ರಮಾಣದ ಬಡ್ಡಿ ದೊರಕುತ್ತದೆ. | *ದಿನಕ್ಕೆ ಎಷ್ಟು ಬಾರಿಯಾದರು ವ್ಯವಹಾರ ನಡೆಸಬಹುದು. ಈ ಖಾತೆಗೆ ಠೇವಣಿಗೆ ಬ್ಯಾಂಕ್ ಬಡ್ಡಿ ನೀಡುವುದಿಲ್ಲ. |
| *ಹಣವನ್ನು ಚೆಕ್/ಚೀಟಿಯಿಂದ ಪಡೆಯಬಹುದು. | *ಗ್ರಾಹಕ ಬ್ಯಾಂಕಿಗೆ ಸೇವಾ ಶುಲ್ಕ ಕಟ್ಟಬೇಕು. |

**IV.ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 9X3=27**

25.ರೈತವಾರಿ ಪದ್ಧತಿಯುಒಳಗೊಂಡಿದ್ದ ಅಂಶಗಳನ್ನು ವಿವರಿಸಿ.

ಉತ್ತರ: *ಅಲೆಕ್ಸಾಂಡರ್ ರೀಡ್ ಮತ್ತು ಥಾಮಸ್ ಮನ್ರೋರವರು ರೈತವಾರಿ ಪದ್ಧತಿಯನ್ನು ಜಾರಿಗೆ ತಂದರು. *ಮದ್ರಾಸ್,ಮೈಸೂರು ಬಾರಮಹಲ್ ಪ್ರಾಂತ್ಯ ಜಾರಿಗೆ ತಂದರು.* ರೈತರು ಭೂಮಿಯ ಒಡೆಯರು. * ರೈತರೇ ನೇರವಾಗಿ ಭೂ ಕಂದಾಯವನ್ನು ಸರ್ಕಾರಕ್ಕೆ ಸಲ್ಲಿಸುತ್ತಿದ್ದರು.* *50% ಕಂದಾಯ ನೀಡಬೇಕಾಗಿತ್ತು.ರೈತರುಭೂಮಿ ಕಳೆದುಕೊಳ್ಳುತ್ತಿದ್ದರು

**ಅಥವಾ** ಸಂಗೊಳ್ಳಿರಾಯಣ್ಣನು ಬ್ರಿಟಿಷರ ವಿರುದ್ಧ ಹೋರಾಡಿದ ಕ್ರಮವನ್ನು ವಿವರಿಸಿ.

:* ಚೆನ್ನಮ್ಮನ ಜೋತೆಗೂಡಿ ಬ್ರಿಟಿಷರ ವಿರುದ್ಧ ಹೋರಾಡಿದನು.* ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಸೈನ್ಯವನ್ನು ಸಂಘಟಿಸಿದನು. *ಬ್ರಿಟಿಷರ ವಿರುದ್ದ ಹೋರಾಡಲು ಯೋಜನೆ ರೂಪಿಸಿದನು.* ಬ್ರಿಟಿಷರ ಸರ್ಕಾರಿ ಖಜಾನೆ ಮತ್ತು ಕಚೇರಿಗಳನ್ನು ಲೂಟು ಮಾಡಿದನು. *ನಂದಗಡ,ಸಂಪಗಾವಿ ,ಕಾನಾಪುರ ರಾಯಣ್ಣನ ಕಾರ್ಯಾಚರಣೆಯ ಸ್ಥಳಗಳಾಗಿದ್ದವು.* ರಾಯಣ್ಣನನ್ನು ಸೆರೆ ಹಿಡಿಯಲು ಬ್ರಿಟಿಷರು ಸಂಚು ರೂಪಿಸಿದರು.*ಅಮಲ್ದಾರ ಕೃಷ್ಣರಾಯನ ಸಂಚಿಗೆ ಬಲಿಯಾದ ರಾಯಣ್ಣ ಬ್ರಿಟಿಷರಸೆರೆಯಾದನು.*ರಾಯಣ್ಣನನ್ನು ನಂದಗಡದಲ್ಲಿ ಗಲ್ಲಿಗೇರಿಯಸಾಯಿತು.

26. ಭಾರತ ಅಭಿವೃದ್ಧಿಯತ್ತ ಸಾಗಲು ಪಂಚವಾರ್ಷಿಕ ಯೋಜನೆಗಳು ಹೇಗೆ ಕಾರಣವಾದವು

ಉತ್ತರ:* ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲಾಗಿದೆ *ಉದ್ಯೋಗವಕಾಶಗಳ ಹೆಚ್ಚಳವಾಗಿದೆ.*ಕೃಷಿ ಅಭಿವೃದ್ಧಿ *ಕೈಗಾರಿಕೆಗಳ ಅಭಿವೃದ್ಧಿ * ತೃತೀಯ ರಂಗದ ಬೆಳವಣಿಗೆ * ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ * ರಾಷ್ಟ್ರೀಯ ಆದಾಯ ದ ಹೆಚ್ಚಳ *ತಲಾದಾಯದಲ್ಲಿ ಹೆಚ್ಚಳ * ಜನರ ಜೀವನ ಮಟ್ಟ ಉತ್ತಮ*ಸಾಕ್ಷರತಾ ಪ್ರಮಾಣ ಹೆಚ್ಚಳ *ಸರಾಸರಿ ಜೀವಿತದ ಅವಧಿ ಹೆಚ್ಚಳ * ಜನಸಂಖ್ಯಾ ಬೆಳವಣಿಗೆ ದರದಲ್ಲಿ ಇಳಿಕೆಯಾಗಿದೆ.

**ಅಥವಾ** ಗ್ರಾಮೀಣಾಭಿವೃದ್ಧಿಯಾಗಲು ಮಹಿಳೆಯರು ಹೇಗೆ ಪ್ರಮುಖರಾಗುತ್ತಾರೆ?

ಉತ್ತರ:*ಗೃಹಿಣಿ *ಕೃಷಿ ಚಟುವಟಿಕೆಗಳಲ್ಲಿ ಭಾಗಿ * ಹೈನುಗಾರಿಕೆ * ಮೀನುಗಾರಿಕೆ * ಪಶುಪಾಲನೆ * ಶಿಕ್ಷಕಿ *ಲಾಯರ್, ಪೋಲೀಸ್,ಕ್ರೀಡೆಯಲ್ಲಿ ಭಾಗವಹಿಸುವುದು * ವೃದ್ಧಾಶ್ರಮಗಳಲ್ಲಿ ಕೆಲಸ ನಿರ್ವಹಿಸುವುದು*ರಾಜಕೀಯ ಕ್ಷೇತ್ರದ ನಿರ್ವಹಣೆ * ಹೆಂಡತಿಯಾಗಿ,ಅತ್ತೆಯಾಗಿ,ಸೊಸೆಯಾಗಿ ಸೇವೆ ಸಲ್ಲಿಸುತ್ತಾಳೆ.

27. ಬ್ಯಾಂಕುಗಳು ಗ್ರಾಹಕರಿಗೆ ಹೇಗೆ ಸಹಾಯಕವಾಗಿವೆ. ?

ಉತ್ತರ:* ಹಣದ ಭದ್ರತೆ * ಹಣದ ಪಾವತಿ * ಹಣದ ವಸೂಲಿ ಮಾಡಲು ಸಹಾಯ * ಸಾಲ ಪಡೆಯಲು ಸಹಾಯ * ಸುಗಮ ವ್ಯವಹಾರ * ಭದ್ರತಾ ಕಪಾಟು ಸೌಲಭ್ಯ ಒದಗಿಸುತ್ತದೆ.

**ಅಥವಾ** ಉದ್ಯಮದಾರರು ದೇಶದ ಆರ್ಥಿಕತೆಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತಾರೆ.?

ಉತ್ತರ:* ಬಂಡವಾಳ ನಿರ್ಮಾಣ * ಉದ್ಯೋಗ ಸೃಷ್ಠಿ * ರಾಷ್ಟ್ರೀಯ ಆದಾಯದ ಹೆಚ್ಚಳ * ತಲಾ ಆದಾಯದ ಹೆಚ್ಚಳ * ಮಾರುಕಟ್ಟೆ ಅಭಿವೃದ್ಧಿ * ಜೀವನ ಮಟ್ಟ ಸುಧಾರಣೆ * ದೇಶದ ರಫ್ತು ಹೆಚ್ಚಳ * ಕೈಗಾರಿಕೆಗಳ ಅಭಿವೃದ್ಧಿ

28. ಕೈಗಾರಿಕಾ ಸ್ಥಾನೀಕರಣಕ್ಕೆ ಸಹಾಯಕವಾಗುವ ಅಂಶಗಳು ಯಾವುವು?

ಉತ್ತರ:*ಕಚ್ಚವಸ್ತುಗಳು*ಭೂಮಿ*ಬಂಡವಾಳ*ಶಕ್ತಿ ಸಂಪನ್ಮೂಲ *ಜಲ ಸಂಪನ್ಮೂಲ *ಖನಿಜ ಸಂಪನ್ಮೂಲ

*ಸಾರಿಗೆ *ಕಾರ್ಮಿಕರ ಸೌಲಭ್ಯ * ಬಂದರು ವ್ಯವಸ್ಥೆ *ಸರ್ಕಾರದ ನೀತಿ.

**ಅಥವಾ** ಭಾರತದ ಕೈಗಾರಿಕಾ ಕೇಂದ್ರಗಳು ಯಾವುವು?

ಉತ್ತರ:*ಹೂಗ್ಲಿ ಕೈಗಾರಿಕಾ ಪ್ರದೇಶ *ಮುಂಬೈ–ಪೂಣೆ ಕೈಗಾರಿಕಾ ಪ್ರದೇಶ *ಅಹಮದಾಬಾದ್–ವಡ್ಡೋದರ ಕೈಗಾರಿಕಾ ಪ್ರದೇಶ *ದಕ್ಷಿಣ ಕೈಗಾರಿಕಾ ಪ್ರದೇಶ *ದಾಮೋದರ್ ಕಣಿವೆ ಕೈಗಾರಿಕಾ ಪ್ರದೇಶ. *ವಿಶಾಖಪಟ್ಟಣ–ಗುಂಟೂರು ಕೈಗಾರಿಕಾ ಪ್ರದೇಶ *ಕೊಲ್ಲಂ–ತಿರುವನಂತಪುರಂ ಕೈಗಾರಿಕಾ ಪ್ರದೇಶ.

29.ಭಾರತದ ಸಾಮಾಜಿಕ ಸುಧಾರಣೆಗೆ ದಯಾನಂದ ಸರಸ್ವತಿಹಾಗೂ ರಾಜಾರಾಮ್‌ಮೋಹನ್ ರಾಯ್‌ರ ಕೊಡುಗೆಗಳೇನು?

ಉತ್ತರ: **ರಾಜಾರಾಮ್ ಮೋಹನ್ ರಾಯ್‌ರ ಕೊಡುಗೆಗಳು:*** ಏಕದೇವತಾರಾಧನೆಗೆ ಪ್ರೋತ್ಸಾಹ * ಅರ್ಥಹೀನ ಆಚರಣೆಗೆ ವಿರೋಧ * ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು. *ಸತಿ ಪದ್ಧತಿ, ಬಾಲ್ಯವಿವಾಹಕ್ಕೆ ವಿರೋಧ * ಸಂವಾದ ಕೌಮುದಿಯ ಮೂಲಕ ವೈಚಾರಿಕತೆ * ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು * ಸ್ತ್ರೀ ಶೋಷಣೆಯನ್ನು ವಿರೋಧಿಸಿದರು * ಮೂರ್ತಿ ಪೂಜೆಯನ್ನು ಖಂಡಿಸಿದರು.

ಉತ್ತರ: **ದಯಾನಂದ ಸರಸ್ವತಿರವರ ಕೊಡುಗೆಗಳು** * ವೇದಗಳು ಸತ್ಯ ಮತ್ತು ಜ್ಞಾನದ ಮೂಲಗಳಾಗಿವೆ.* ವೇದಗಳಿಗೆ ಹಿಂತಿರುಗಿ ಎಂದು ಕರೆ ನೀಡಿದರು.* ಸ್ವದೇಶಿ ವಸ್ತುಗಳ ಬಳಕೆಗೆ ಪ್ರೋತ್ಸಾಹ * ಅಂತರ್ ಜಾತಿ ವಿವಾಹಕ್ಕೆ ಪ್ರೋತ್ಸಾಹ * ಬಹು ಪತ್ನಿತ್ವ ಮತ್ತು ಬಾಲ್ಯ ವಿವಾಹ ಪದ್ಧತಿಗೆ ವಿರೋಧ * ಶುದ್ಧಿ ಚಳವಳಿ ಆರಂಭ * ಭಾರತೀಯರಿಗೆ ಭಾರತ ಎಂದು ಘೋಷಣೆ ಘೋಷಣೆ ನೀಡಿದರು.* ಸತ್ಯಾರ್ಥ ಪ್ರಕಾಶ ಪತ್ರಿಕೆ ಮೂಲಕ ತಮ್ಮ ವಿಚಾರಗಳನ್ನು ತಿಳಿಸಿದರು.

30. 1857ರ ಮಹಾದಂಗೆಯು ವಿಫಲವಾಗಲು ಕಾರಣಗಳೇನು?

ಉತ್ತರ:*ಇದು ಇಡೀ ಭಾರತವನ್ನು ವ್ಯಾಪಿಸಿದ ಹೋರಾಟವಾಗಿರಲಿಲ್ಲ.*ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ದೇಶೀ ರಾಜರ ಮತ್ತು ಜಮೀನ್ದಾರರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದಿತ್ತು.*ಇದು ಯೋಜಿತ ಹೋರಾಟವಾಗಿರಲಿಲ್ಲ.*ಭಾರತೀಯ ಸೈನಿಕರಲ್ಲಿ ಒಗ್ಗಟ್ಟಿನ ಕೊರತೆ * ಸೂಕ್ತ ಮಾರ್ಗದರ್ಶನದ ಕೊರತೆ *ವ್ಯವಸ್ಥಿತ ಸಂಘಟನೆಯ ಕೊರತೆ * ಸೂಕ್ತ ಸೇನಾ ನಾಯಕತ್ವದ ಕೊರತೆ * ಯುದ್ಧ ತಂತ್ರ ಮತ್ತು ಸೈನಿಕ ಪರಿಣಿತಿ ಕೊರತೆ * ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ. *ಕೆಲವು ದೇಶೀಯ ರಾಜರು ಬ್ರಿಟಿಷರಿಗೆ ನಿಷ್ಠೆಯಿಂದ ಭಾರತೀಯ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ.

31. ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಭಾರತ ಪರುಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ. ಸಮರ್ಥಿಸಿ.

ಉತ್ತರ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರಂತರ ಪ್ರಯತ್ನ * ವಿಶೇಷ ಪರಿಣಿತ ಪಡೆಗಳ ನೇಮಕ * ರಕ್ಷಣಾ ಪಡೆಗಳ ಬಳಕೆ * ಭಯೋತ್ಪಾದಕ ನಿಗ್ರಹ ತಂಡ ರಚನೆ * ವಿಮಾನ ನಿಲ್ದಾಣಗಳಲ್ಲಿ ಕಟ್ಟೆಚ್ಚರ.*ರಾಷ್ಟ್ರೀಯ ತಣಿಖಾ ದಳ ಸ್ಥಾಪನೆ.*ರಾಜ್ಯ ಸರ್ಕಾರಗಳು ಭಯೋತ್ಪಾದಕ ನಿಗ್ರಹ ಪಡೆಗಳನ್ನು ರಚಿಸಿದೆ.*ಗುಪ್ತ ಚರ ಸಂಸ್ಥೆಗಳು–ಇಂಟಲಿಜೆನ್ಸ್ ಬ್ಯೂರೋ, ಸಂಶೋಧನೆ ಮತ್ತು ವಿಶ್ಲೇಷಣಾ ಘಟಕ *ಹಣಕಾಸು ಗುಪ್ತಚರ ಘಟಕ ಸ್ಥಾಪನೆ.

32. ಸಾಮಾಜಿಕ ಸ್ತರ ವಿನ್ಯಾಸವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೆನು?

ಉತ್ತರ:* ಸಂವಿಧಾನದ ವಿಧಿ 17 **ಅಸ್ಪೃಶ್ಯತಾ ಆಚರಣೆ ನಿಷೇಧ** * 1955 ಅಸ್ಪೃಶ್ಯತಾ ಅಪರಾದಗಳ ಕಾಯದೆ ಜಾರಿ * 1976 ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯಾಗಿ ತಿದ್ದುಪಡಿ **–ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿದೆ.**

* 1989ರ ಶಾಸನ –ರಾಜ್ಯ ಸರ್ಕಾರಗಳಿಗೆ ಅಸ್ಪೃಶ್ಯತಾ ಆಚರಣೆ ನಿಷೇಧಕ್ಕೆ ವಿಶೇಷ ಜವಾಬ್ದಾರಿ ನೀಡಿದೆ. *ಸಾರ್ವತ್ರಿಕ ಮತದಾನ *ಸಮಾನತೆಯ ಹಕ್ಕು *ರಾಜಕೀಯದಲ್ಲಿ ಮೀಸಲಾತಿ * ಶಿಕ್ಷಣದಲ್ಲಿ ಮೀಸಲಾತಿ *ಉದ್ಯೋಗದಲ್ಲಿ ಮೀಸಲಾತಿ.

33. ಭಾರತದ ರಸ್ತೆ ಸಾರಿಗೆಯು ಇತರೆ ಸಾರಿಗೆಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಹೇಗೆ?

ಉತ್ತರ:* ಹಳ್ಳಿಯ ಮತ್ತು ಕೃಷಿಯ ಅಭಿವೃದ್ಧಿ* ರೈಲು ಸಾರಿಗೆಗೆ ಪೂರಕ * ವಾಯು ಸಾರಿಗೆಗೆ ಪೂರಕ * ರೈತರು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು *ಸರಕು ಮತ್ತು ಸೇವೆಗಳ ಸಾಗಣಿಕೆಗೆ ಅನುಕೂಲ* ಕೈಗಾರಿಕೆಗಳ ಅಭಿವೃದ್ಧಿ*ಗಣಿಗಾರಿಕೆ * ಅರಣ್ಯಾಗಾರಿಕೆ*ಮೀನುಗಾರಿಕೆ*ಹೈನುಗಾರಿಕೆ *ಉದ್ಯೋಗ ಸೃಷ್ಠಿ *ಸಂಪರ್ಕ ಅಭಿವೃದ್ಧಿ * ದೇಶದ ಆರ್ಥಿಕ ಪ್ರಗತಿ* ರಾಷ್ಟ್ರೀಯ ಆದಾಯಹೆಚ್ಚಳ * ತಲಾ ವರಮಾನ ಹೆಚ್ಚಳ * ಜೀವನ ಮಟ್ಟ ಸುಧಾರಣೆ

**V.ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲಿ ಅಥವಾ ಅಂಶಗಳಲಿ ಉತರಿಸಿ : 4X4=16**

34. ಭಾರತದಲ್ಲಿ ಬ್ರಿಟಿಷ್ ಶಿಕ್ಷಣದಿಂದಾದ ಪರಿಣಾಮಗಳನ್ನು ವಿವರಿಸಿ.
ಉತ್ತರ:* ಆಧುನಿಕ **ಜ್ಯಾತ್ಯಾತೀತತೆ,ಪ್ರಜಾಪ್ರಭುತ್ವ ಆಲೋಚನಾ ಕ್ರಮ**ಗಳ ಬೆಳವಣಿಗೆಯಾದವು.
*** ರಾಷ್ಟ್ರೀಯವಾದಿ ದೃಷ್ಠಿಕೋನ ಬೆಳವಣಿಗೆ * ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆ * ನೂತನ ವಿದ್ಯಾವಂತ ವರ್ಗ ರಚನೆ *ವೃತ್ತ ಪತ್ರಿಕೆಗಳ ಹುಟ್ಟು * ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳ ಉಗಮ * ರೋಸೋ,ಮಿಲ್,ಮಾಂಟೋಸ್ಕೋರವರ ಚಿಂತನೆಗಳ ಪ್ರಭಾವ * ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ** ಮೂಡಿತು. *** ಸ್ವತಂತ್ರ್ಯ ಚಳವಳಿಗಳ ಪ್ರಭಾವ** ಭಾರತೀಯರ ಮೇಲಾಯಿತು.

**ಅಥವಾ** ಭಾರತದ ಒಕ್ಕೂಟಕ್ಕೆ ಜಮ್ಮು –ಕಾಶ್ಮೀರ ವಿಲೀನಗೊಂಡ ಪ್ರಕ್ರಿಯೆಯನ್ನು ವಿವರಿಸಿ.
ಉತ್ತರ:ಜಮ್ಮು ಕಾಶ್ಮೀರದ ರಾಜ ಹರಿಸಿಂಗ್ ಸ್ವತಂತ್ರವಾಗಿರಲು ನಿರ್ಧರಿಸಿದನು. * ಪಾಕಿಸ್ತಾನವು ಜಮ್ಮು ಕಾಶ್ಮೀರ ಭಾರತಕ್ಕೆ ಸೇರದಂತ್ತೆ ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡಲು ಪ್ರಚೋದಿಸಿತು. * ಕಾಶ್ಮೀರದ ಸ್ವಾತಂತ್ರಕ್ಕಾಗಿ ದುಡಿದ ಷೇಕ್ ಅಬ್ದುಲ್ಲಾ ಕಾಶ್ಮೀರ ಭಾರತಕ್ಕೆ ಸೇರಲು ಹೋರಾಟ ನಡೆಸಿದನು.* ರಾಜಾ ಹರಸಿಂಗನ್ನು ಭಾರತದ ಸಹಾಯ ವನ್ನು ಕೋರಿದನು.* ಕಾಶ್ಮೀರವು ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು. * ಕಾಶ್ಮೀರದ ಒಂದು ಭಾಗ ಪಾಕಿಸ್ತಾನದಲ್ಲಿ ಉಳಿಯಿತು.* ಇದರ ವಿರುದ್ಧ ಭಾರತ ವಿಶ್ವಸಂಸ್ಥೆಗೆ ದೂರು ನೀಡಿತು. * ವಿಶ್ವಸಂಸ್ಥೆ 1 ಜನವರಿ 1949ರಲ್ಲಿ ಕದನ ವಿರಾಮದ ಆದೇಶ ನೀಡಿತು.
35.ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರಗಾಮಿಗಳ ಪಾತ್ರವೇನು?
ಉತ್ತರ:ಮಂದಗಾಮಿಗಳ ಮೃದು ಧೋರಣೆಯನ್ನು ಟೀಕೆ ಮಾಡುತ್ತಾ,ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗುದೆ.ನಾಯಕರುಗಳು:**ಅರಬಿಂದೋ ಘೋಷ್,ಬಿಪಿನ್ ಚಂದ್ರಪಾಲ್ ,ಲಾಲ ಲಜಪತರಾಯ್,ಬಾಲ ಗಂಗಾಧರ ತಿಲಕ್***ಬಂಗಾಳದ ವಿಭಜನೆಯನ್ನು ವಿರೋಧಿಸಿದರು.*ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು.*ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು. ಬಾಲಗಂಗಾಧರ ತಿಲಕರ ಪಾತ್ರ.*ಪೂರ್ಣ ಸ್ವರಾಜ್ಯ ಡೆಯುವುದು ನಮ್ಮ ಗುರಿ ಎಂದು ಘೋಷಣೆ ಮಾಡಿದರು.*ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವುದು.***ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೇ ಪಡೆಯುತ್ತೇನೆ** ಎಂದು ಘೋಷಿಸಿದರು.*ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿದರು. * **ಶಿವಾಜಿ,ಗಣೇಶ,ದುರ್ಗ** ಮುಂತಾದ ಉತ್ಸವಗಳ ಮೂಲಕ ಜನರನ್ನು ರಾಷ್ಟ್ರೀಯತೆಗೆ ಪ್ರಚೋದಿಸಿದರು.***ತಿಲಕರು** ಮರಾಠಿ ಭಾಷೆಯಲ್ಲಿ **ಕೇಸರಿ** ಮತ್ತು ಇಂಗ್ಲಿಷ್ ಭಾಷೆಯಲ್ಲಿ **ಮರಾಠ ಪತ್ರಿಕೆ**ಗಳನ್ನು ಬ್ರಿಟಿಷರ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡರು.*ತಿಲಕರು ಜೈಲಿನಲ್ಲಿ ಕುಳಿತು ಗೀತಾ ರಹಸ್ಯ ಎಂಬ ಕೃತಿ ರಚಿಸಿದರು.
36. ಬೆಳೆ ಮಾದರಿಯನ್ನು ನಿರ್ಧರಿಸುವ ಅಂಶಗಳು ಯಾವುವು?
ಉತ್ತರ:**ಪ್ರಾಕೃತಿಕ ಅಂಶಗಳು:***ಭೂಸ್ವರೂಪ*ವಾಯುಗುಣ*ಮಣ್ಣಿನ ಲಕ್ಷಣ **ಆರ್ಥಿಕ ಅಂಶಗಳು:***ಉದ್ಯೋಗ
*ಭೂ ಹಿಡುವಳಿ*ವ್ಯವಸಾಯೋತ್ಪನ್ನಗಳ ಬೇಡಿಕೆ *ಜನಸಂಖ್ಯೆ *ನೀರಾವರಿ ಸೌಲಭ್ಯ*ಮಾರುಕಟ್ಟೆ, *ಭೂ ಒಡೆತನ
**ಸಾಮಾಜಿಕ ಅಂಶಗಳು:** * ತಾಂತ್ರಿಕ ಅಂಶಗಳು,ಜನರ ಮನೋಭಾವ,ಮಾನವನ ಸಾಮರ್ಥ್ಯ.
37. ಲಿಂಗ ತಾರತಮ್ಯ ನಿವಾರಣಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?
ಉತ್ತರ:*ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯನ್ನು ಆರಂಭಿಸಲಾಗಿದೆ *ಮಹಿಳಾ ಶಿಕ್ಷಣಕ್ಕೆ ಆದ್ಯತೆ * ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿ * ವರದಕ್ಷಿಣೆ ನಿಷೇಧ ಕಾಯ್ದೆ ಜಾರಿ * ಬಹು ಪತ್ನಿತ್ವ ನಿಷೇಧ * ಸ್ತ್ರೀ ಶಕ್ತಿ ಕಾರ್ಯಕ್ರಮ ಜಾರಿ * ಮಹಿಳಾ ಮಂಡಳಿ, ಯುವತಿ ಮಂಡಳಿಗಳ ರಚನೆ.*ಸ್ವ ಸಹಾಯ ಸಂಘಗಳ ಸ್ಥಾಪನೆ *ಮಹಿಳಾ ಸಹಕಾರಿ ಸಂಘಗಳ ಸ್ಥಾಪನೆ.*ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು*ಮಹಿಳೆಯರಿಗೆ ಉದ್ಯೋಗ,ರಾಜಕೀಯ ಮತ್ತ ಶಿಕ್ಷಣದಲ್ಲಿ ಮೀಸಲಾತಿ ನೀಡಿದೆ.*ರಾಷ್ಟ್ರ ಮತ್ತು ರಾಜ್ಯ ಮಟ್ಟದ ಮಹಿಳಾ ಆಯೋಗಗಳ ಸ್ಥಾಪನೆ. ಸಖಿ ಒನ್ ಸ್ಟಾಪ್ ಸೆಂಟರ್ ಸ್ಥಾಪನೆ *ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಕಾಯ್ದೆ(2005) * ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆ(2013).* ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 50% ಮೀಸಲಾತಿ. * ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ.(ನಾರಿಶಕ್ತಿ ವಂದನಾ)

**VI.38.**ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ 5ನ್ನು ಗುರುತಿಸಿ. **5X1=5**

ಎ)ನಾಗಾರ್ಜುನ ಸಾಗರ ಬಿ) ರಾಜೀವ್ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸಿ) ಕೋರಮಂಡಲ ತೀರ

ಡಿ) ವಿಂದ್ಯಾ ಪರ್ವತ ಇ) ಪಾಕ್ ಜಲಸಂಧಿ ಎಫ್) ಉತ್ಕಲ ತೀರ ಜಿ) ಭಾರತದ ಹೆಬ್ಬಾಗಿಲು

